# ಅಧ್ಯಾತ್ಮದಲ್ಲಿ 'ಸತ್ಯ' ಶೋಧನೆ

ವಿದ್ವಾನ್ ಮಧುಸೂದನ ಭಟ್

*ಸತ್ಯ ಕೇವಲ ನುಡಿಗೆ ಮಾತ್ರವಲ್ಲದೆ ನಡೆಗೂ ಅನ್ವಯಿಸುತ್ತದೆ ಎಂಬುದನ್ನು ಹಲವು ಉದಾಹರಣೆಗಳ ಮೂಲಕ ತಿಳಿಸುತ್ತ ಸತ್ಯದ ವಿಶಾಲಾರ್ಥವನ್ನು ವಿವರಿಸಿರುವ ಮಾನ್ಯ ಲೇಖಕರು ಉಡುಪಿಯ ಉಪೇಂದ್ರ ಪೈ ಮೆಮೋರಿಯಲ್ ಕಾಲೇಜಿನಲ್ಲಿ ಸಂಸ್ಕೃತ ಉಪನ್ಯಾಸಕರಾಗಿರುವರು.*

ಹನ್ನೆರಡು ವರ್ಷಗಳ ಗುರುಕುಲ ಶಿಕ್ಷಣವನ್ನು ಪೂರೈಸಿ ಶಿಷ್ಯನನ್ನು ಬೀಳ್ಕೊಡುವ ಸಮಯದಲ್ಲಿ ಗುರುಗಳ ಕೊನೆಯ ಉಪದೇಶದ ಪ್ರಥಮ ನುಡಿರತ್ನವೆನಿಸಿದ "ಸತ್ಯಂ ವದ", "ಧರ್ಮಂ ಚರ" ಎಂಬುದು ತೈತ್ತಿರೀಯೋಪನಿಷತ್ತಿನಲ್ಲಿ ಪ್ರಸಿದ್ಧವಾಗಿದೆ. ಸತ್ಯವನ್ನು ಹೇಳು, ಧರ್ಮವನ್ನು ಆಚರಿಸು ಎಂಬುದನ್ನು ಮೇಲಿನ ವಾಕ್ಯಗಳು ಸಾರುತ್ತವೆ. ಏನಿದು ಸತ್ಯ? "ಶ್ರೀಮದ್ಭಾಗವತ"ದಲ್ಲಿ ಭೂದೇವಿಯು ಒಂದು ಸಂದರ್ಭದಲ್ಲಿ ಹೇಳುವ ಮಾತು ಈ ರೀತಿ ಇದೆ: **ಸರ್ವಂ ಸೋಢುಂ ಅಲಂ ಮನ್ಯೇ ಋತೇsಲೀಕಂ ನರಂ ಪರಮ್**—"'ಕ್ಷಮಾ' ಎಂಬ ಅನ್ವರ್ಥನಾಮಧೇಯಳಾದ ನಾನು ಸರ್ವವನ್ನೂ ಸಹಿಸುವೆನು. ಆದರೆ ಸುಳ್ಳು ಹೇಳುವವನನ್ನು ಮಾತ್ರ ಸಹಿಸಲಾರೆ." ಹಾಗಾದರೆ ಸುಳ್ಳು ಹೇಳದಿರುವುದು ಸತ್ಯವೆಂದಾಯ್ತು. ಸುಳ್ಳುಹೇಳದಿರುವುದು ಸತ್ಯವೇನೋ ಸರಿ. ಆದರೆ 'ಸತ್ಯ' ಶಬ್ದಾರ್ಥ ಕೇವಲ ಸುಳ್ಳು ಹೇಳದಿರುವು ದಕ್ಕಷ್ಟೇ ಸೀಮಿತವೆ? ಒಮ್ಮೆ ಒಬ್ಬ ನಿರಪರಾಧಿ ಇಡುಗಂಟಿನ ಪಂಡಿತನನ್ನು ಹಣದ ಆಮಿಷದಿಂದ ದರೋಡೆಕೋರರು ಹಿಂಬಾಲಿಸುತ್ತಾರೆ. ಕಾಡಲ್ಲಿ ಅಲೆದಾಡಿದ ಆ ಪಂಡಿತನು ವೃಕ್ಷದ ಕೆಳಗೆ ತಪಸ್ಸನ್ನಾಚರಿಸುತ್ತಿದ್ದ ಕೌಶಿಕ ಮುನಿಯನ್ನು ಆಶ್ರಯಿಸುತ್ತಾನೆ. ಹಿಂಬಾಲಿಸಿ ಬಂದ ಆ ದರೋಡೆಕೋರರು ಆ ಪಂಡಿತನನ್ನು ಕಾಣದೆ ತಪೋನಿರತನಾಗಿದ್ದ ಕೌಶಿಕ ಮುನಿಯಲ್ಲಿ ಅವನ ಬಗ್ಗೆ ವಿಚಾರಿಸುತ್ತಾರೆ. ನಿಜವಿಚಾರವನ್ನು ತಿಳಿದುಕೊಂಡಿರುವ ಕೌಶಿಕ ಮುನಿಯು ಈ ಸಂದರ್ಭದಲ್ಲಿ ಏನು ಹೇಳಬೇಕು? ಸುಳ್ಳು ಹೇಳದಿರುವುದೇ ಸತ್ಯವೆಂದಾದರೆ ತನಗೆ ಗೊತ್ತಿರುವ ವಿಚಾರವನ್ನು ಕೌಶಿಕ ಮುನಿಯು ಹೇಳಿದರೆ ವಿಪ್ರೋತ್ತಮನ ಗತಿ ಏನಾಗಬೇಕು? ಹಾಗೆಂದು ತಿಳಿದಿರುವ ನಿಜವಿಚಾರವನ್ನು ಮುಚ್ಚಿಟ್ಟರೆ ಸುಳ್ಳು ಹೇಳಿದಂತಾಗುವುದಿಲ್ಲವೆ? ಈ ದ್ವಂದ್ವದಲ್ಲಿ ತೊಳಲಾಡಿದ ಕೌಶಿಕನ ಬಾಯಿಂದ "ನನಗೆ ಗೊತ್ತಿಲ್ಲ" ಎಂಬ ಮಿಥ್ಯಾ ಉದ್ಗಾರವೇನೋ ಬಂತು. ಆದರೆ ಅದು ಮಿಥ್ಯೆ ಅಲ್ಲ. ಸತ್ಯವೇ ಆಗಿದೆ. ಹಾಗಾದರೆ ನೈಜ ಸತ್ಯ ಎಂದರೇನು? ಮಹಾಭಾರತವು 'ಸತ್ಯ' ಶಬ್ದಾರ್ಥವನ್ನು ಈ ರೀತಿ ವಿಶ್ಲೇಷಿಸುತ್ತದೆ :

**ಸತ್ಯಸ್ಯ ವಚನಂ ಶ್ರೇಯಃ ಸತ್ಯಜ್ಞಾನಂ ತು ದುಷ್ಕರಂ |**
**ಯತ್ಸತಾಂ ಹಿತಮತ್ಯಂತಂ ತತ್ಸತ್ಯಮಿತಿ ನಿಶ್ಚಯಃ ||**

"ಸತ್ಯವಚನವನ್ನು ನುಡಿಯುವುದು ಶ್ರೇಯಸ್ಕರ. ಆದರೆ ಯಾವುದು ಸತ್ಯ ಎಂದು ತಿಳಿಯುವುದೇ ದುಷ್ಕರ. ಆದ್ದರಿಂದ ಯಾವುದು ಸಜ್ಜನರಿಗೆ ಹಿತವೋ ಅದು ಸತ್ಯ." ಮೇಲಿನ ಕಥೆಯಲ್ಲಿ ಕೌಶಿಕ ಮುನಿಯ ಮಿಥ್ಯಾನುಡಿಯಿಂದಲೇ ಸಜ್ಜನ ವಿಪ್ರನಿಗೆ ಹಿತವಾಗುವುದರಿಂದ ಅದು ಸತ್ಯವೆಂದೇ ಪರಿಗಣಿತವಾಗುತ್ತದೆ. ದ್ರೋಣಾಚಾರ್ಯರ ಅವತಾರಕಾರ್ಯ ಮುಗಿದಿದೆ, ಸಾಧನೆಗಳು ಪರಿಪೂರ್ಣವಾಗಿವೆ. ಅವರ ಅಂತ್ಯಕ್ಕೆ ಬೇರೆ ಯಾವ ಮಾರ್ಗವನ್ನೂ ಕಾಣದೆ **"ಅಶ್ವತ್ಥಾಮಾ ಹತಃ ಕುಂಜರ"** ಎಂಬ ಅಸತ್ಯ ವಚನವನ್ನು ಶ್ರೀಕೃಷ್ಣನು ಧರ್ಮಜನ ಮುಖದಿಂದ ಹೊರಹೊಮ್ಮಿಸುತ್ತಾನೆ. ದ್ರೋಣರ ಸಂಹಾರವಾಗದೆ ಕೌರವರ ನಾಶವಿಲ್ಲ. ಕೌರವರ ನಾಶವಿಲ್ಲದೆ ದುಷ್ಟಸಂಹಾರವಿಲ್ಲ. ದುಷ್ಟಸಂಹಾರವಾಗದೆ ಧರ್ಮಸಂಸ್ಥಾಪನೆ ಆಗಲಾರದು. ಈ ದಿಶೆಯಲ್ಲಿ ಧರ್ಮಜನ ಮುಖದಿಂದ ಹೊರಹೊಮ್ಮಿದ ವಾಕ್ಯ ಮೇಲ್ನೋಟಕ್ಕೆ ಅಸತ್ಯವಾಗಿ ಕಂಡರೂ ಸಜ್ಜನರ ಹಿತದೃಷ್ಟಿಯಿಂದ ಅದು ಸತ್ಯವೇ ಆಗಿದೆ.

ತ್ರಿಕರಣಪರಿಶುದ್ಧಿಯೇ ಸತ್ಯ ಎಂಬುದು ಇನ್ನೊಂದು ಅಭಿಪ್ರಾಯ. ಮನೋವಾಕ್ಕಾಯದ ಏಕರೂಪತೆಯೇ ಸತ್ಯ. ಯಾವ ಕಾಲದಲ್ಲಿಯೂ ಇಲ್ಲಿ ವಂಚನೆ ಸಲ್ಲದು. ವಿಚಿತ್ರವೀರ್ಯ, ಚಿತ್ರಾಂಗದರೆಂಬ ಇಬ್ಬರು ಮಕ್ಕಳೂ ದೈವವಶರಾದಾಗ ವಂಶಛಿನ್ನತೆಯ ಸಂಶಯವು ಮಾತೆಯಾದ ಸತ್ಯವತಿಯನ್ನು ಆವರಿಸುತ್ತದೆ. ವಿಚಿತ್ರವೀರ್ಯನ ಹೆಂಡತಿಯರಾದ ಅಂಬಿಕೆ, ಅಂಬಾಲಿಕೆಯರಲ್ಲಿ ಮಕ್ಕಳನ್ನು ಪಡೆದು ವಂಶವನ್ನುಳಿಸುವ ಆಪದ್ಧರ್ಮದ ಅನಿವಾರ್ಯತೆಯನ್ನು ಉಳಿದಿರುವ ಏಕೈಕ ಪುತ್ರ ಭೀಷ್ಮನಿಗೆ ಆ ಮಾತೆಯು ತಿಳಿಹೇಳುತ್ತಾಳೆ. ಆ ಸಂದರ್ಭದಲ್ಲಿ ಭೀಷ್ಮನ ಪ್ರತಿಕ್ರಿಯೆ ತ್ರಿಕರಣ ಪರಿಶುದ್ಧಿಯ ಸತ್ಯವಾದಿತ್ವಕ್ಕೆ ಜ್ವಲಂತ ನಿದರ್ಶನವಾಗಿದೆ :

**ತ್ಯಜೇಚ್ಚ ಪೃಥಿವೀ ಗಂಧಂ ಆಪಶ್ಚ ರಸಮಾತ್ಮನಃ**
**ಜ್ಯೋತಿಸ್ತಥಾ ತ್ಯಜೇದ್ರೂಪಂ ವಾಯುಃ ಸ್ಪರ್ಶಗುಣಂ ತ್ಯಜೇತ್|**
**ಪ್ರಭಾಂ ಸಮುತ್ಸೃಜೇದರ್ಕೋ ಧೂಮಕೇತುಸ್ತಥೋಷ್ಮತಾಂ**
**ತ್ಯಜೇಚ್ಛಬ್ದಂ ತಥಾಕಾಶಂ ಸೋಮಃ ಶೀತಾಂಶುತಾಂ ತ್ಯಜೇತ್||**

"ಒಂದೊಮ್ಮೆ ಭೂಮಿ ತನ್ನ ಸ್ವಭಾವಸಿದ್ಧವಾದ ಗಂಧಗುಣವನ್ನೂ ನೀರು ರಸವನ್ನೂ ಜ್ಯೋತಿ ರೂಪವನ್ನೂ ವಾಯು

ಸ್ಪರ್ಶವನ್ನೂ ಸೂರ್ಯನು ಪ್ರಭೆಯನ್ನೂ ಅಗ್ನಿಯು ಸುಡು ವಿಕೆಯನ್ನೂ ಪರಿತ್ಯಜಿಸಿದರೂ ನಾನು ಮಾತ್ರ ನನ್ನ ಸ್ವಭಾವ ಸಿದ್ಧವಾದ ಸತ್ಯವಚನವನ್ನು ಬಿಡಲಾರೆ." ಇದು ಭೀಷ್ಮನ ದಿಟ್ಟ ನುಡಿ. ಅತ್ತ ಶ್ರೀಮದ್ಭಾಗವತದಲ್ಲಿ ಗುರುಗಳಾದ ಶುಕ್ರಾಚಾರ್ಯರ ಶಾಪಕ್ಕೆ ಒಳಗಾದರೂ ಸತ್ಯವಿಮುಖ ನಾಗಲು ಬಲಿಚಕ್ರವರ್ತಿಯು ಬಯಸುವುದಿಲ್ಲ:

**ನಾಹಂ ಬಿಭೇಮಿ ನಿರಯಾತ್ ನಾಧನ್ಯಾದಸುಖಾರ್ಣವಾತ್ |**
**ನ ಸ್ಥಾನಚ್ಯವನಾತ್ ಮೃತ್ಯೋಃ ಯಥಾ ವಿಪ್ರಪ್ರಲಂಭನಾತ್ ||**

"ಯಾರಿಗಾದರೂ ಒಮ್ಮೆ ಮಾತನ್ನು ಕೊಟ್ಟು ಅನಂತರ ವಂಚಿಸುವುದನ್ನು ಯೋಚಿಸಿದಾಗ ಆಗುವ ಭಯವು ದುಃಖ ಸಾಗರ ಸಮಾನವಾದ ನರಕ ಪ್ರದೇಶದಿಂದಾಗಲೀ, ಸ್ಥಾನಚ್ಯುತಿ ಯಿಂದಾಗಲೀ, ಮೃತ್ಯುಸನ್ನಿಹಿತವಾಗುತ್ತಿದೆ ಎಂಬ ಕಾರಣ ಕ್ಕಾಗಿಯೂ ಖಂಡಿತ ಆಗುವುದಿಲ್ಲ." ಇದು ಬಲಿ ಚಕ್ರ ವರ್ತಿಯ ಸತ್ಯಪರಿಪಾಲನೆ. ಕರ್ಣನ ಜೀವರಕ್ಷಣೆಯ ಏಕೈಕ ಸಾಧನವಾಗಿರುವ ಕವಚಕುಂಡಲಗಳನ್ನು ದಾನವನ್ನಾಗಿ ಪಡೆದು ತನ್ನ ಮಗನಾದ ಅರ್ಜುನನ್ನು ಉಳಿಸುವ ಹೊಂಚು ದೇವೇಂದ್ರನದು. ಇದನ್ನು ಸಾಕ್ಷಾತ್ ಸೂರ್ಯದೇವನು ಮಗ ನಾದ ಕರ್ಣನಿಗೆ ತಿಳಿಯಪಡಿಸಿದರೂ ಅವನು ಮೃತ್ಯುವಿಗೆ ಹೆದರದೆ ದಾನಕ್ಕೆ ಮಹತ್ವ ನೀಡಿ ದಾನಶೂರನಾಗುತ್ತಾನೆ. ಇಲ್ಲಿ ಕರ್ಣನು ತನ್ನ ದಾನಪ್ರತಿಜ್ಞೆಯಿಂದ ವಿಮುಖನಾಗದೆ ಸತ್ಯಪರಿಪಾಲನೆ ಮಾಡುತ್ತಾನೆ. ವಿಶ್ವಜಿತ್ ಯಾಗದ ಸಂದರ್ಭದಲ್ಲಿ ಹಾಲು ಕೊಡಲಸಮರ್ಥವಾದ, ಗೋಣೆತ್ತ ಲಾಗದ ನಿರುಪಯುಕ್ತವಾದ ವೃದ್ಧ ಗೋವುಗಳನ್ನು ತಂದೆ ಯಾದ ವಾಜಶ್ರವಸ್ಸು ದಾನ ಮಾಡುತ್ತಿರಲು ಮಗನಾದ ನಚಿ ಕೇತನಿಗೆ ಇದು ಸರಿ ಬರಲಿಲ್ಲ. "ತಂದೆಯೇ, ಪ್ರಿಯನಾದ ನನ್ನನ್ನು ಯಾರಿಗೆ ಕೊಡುತ್ತಿ?"—ತಂದೆಯ ಮುಂದೆ ನಚಿ ಕೇತನ ಪ್ರಶ್ನೆ. ಮತ್ತೆ ಮತ್ತೆ ಮಗನು ಅದೇ ಪ್ರಶ್ನೆ ಕೇಳಲು ಮುಂಗೋಪಿಯಾದ ತಂದೆಯು **ಮೃತ್ಯವೇ ತ್ವಾಂ ದದಾಮಿ**— "ನಿನ್ನನ್ನು ಮೃತ್ಯುವಿಗೆ ಕೊಡುವೆನು" ಎನ್ನುತ್ತಾನೆ. ತಂದೆಯ ಈ ಮಾತಲ್ಲಿ ಸತ್ಯತೆಯನ್ನು ಮನಗಂಡು ಮೃತ್ಯುಭವನದ ಕದ ತಟ್ಟಿ ಯಮನನ್ನು ಸುಪ್ರೀತಗೊಳಿಸಿದ ನಚಿಕೇತನ ಕಥೆಯು ಕಾಠಕೋಪನಿಷತ್ತಿನಲ್ಲಿ ಬರುತ್ತದೆ. ಹೀಗೆ ಸಾರ್ವ ಕಾಲಿಕವಾದ ತ್ರಿಕರಣ ಪರಿಶುದ್ಧತೆಯ ಸತ್ಯ ಶಬ್ದವು ಅರ್ಥ ವೈಶಾಲ್ಯವನ್ನು ಹೊಂದಿದೆ.

'ಸತ್ಯ' ಶಬ್ದ ವ್ಯಾಖ್ಯಾನಾನಂತರ ಸತ್ಯವನ್ನು ಹೇಳುವ ಕ್ರಮವನ್ನು ಮನು ಈ ರೀತಿ ವಿವರಿಸಿದ್ದಾನೆ.

**ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್,**
**ನ ಬ್ರೂಯಾತ್ ಸತ್ಯಮಪ್ರಿಯಂ |**
**ಪ್ರಿಯಂ ಚ ನಾನೃತಂ ಬ್ರೂಯಾತ್ ಏಷ ಧರ್ಮಃ ಸನಾತನಃ||**

ಸತ್ಯವು ಪ್ರಿಯವಾಗಿರಬೇಕು. ಒಂದು ದಂತ ಕಥೆ ಹೀಗಿದೆ. ಒಬ್ಬ ರಾಜನಿಗೆ ಕನಸಲ್ಲಿ ತನ್ನ ಒಂದು ಹಲ್ಲು ಉಳಿದು ಉಳಿದುದೆಲ್ಲ ಕಿತ್ತುಹೋಗಿರುವ ಅನುಭವವಾಯಿತು. ಮರುದಿನ ಬೆಳಕು ಹರಿದ ಕೂಡಲೆ ಶಕುನಶಾಸ್ತ್ರಿಗೆ ಕರೆ ಹೋಗುತ್ತದೆ. ಬಂದ ಶಾಸ್ತ್ರಿಗೆ ರಾಜ ಸ್ವಪ್ನವೃತ್ತವನ್ನು ಅರುಹುತ್ತಾನೆ. ಆಲಿಸಿದ ಶಾಸ್ತ್ರಿಯು ಶಕುನದ ಫಲವನ್ನು ಹೇಳುತ್ತ "ರಾಜ, ನೀನು ಸಾಯುವುದಕ್ಕಿಂತ ಮೊದಲು ನಿನ್ನ ಪರಿವಾರದವರೆಲ್ಲ ಸಾಯುತ್ತಾರೆ" ಎನ್ನುತ್ತಾನೆ. ರಾಜ ತತ್‌ಕ್ಷಣದಲ್ಲೇ ಆ ಶಾಸ್ತ್ರಿಯನ್ನು ಸೇವೆಯಿಂದ ವಜಾಗೊಳಿಸಿ ಮತ್ತೊರ್ವ ಶಕುನಶಾಸ್ತ್ರಜ್ಞನನ್ನು ಕರೆಯಿಸುತ್ತಾನೆ. ಶಕುನದ ಫಲಶ್ರುತಿಯನ್ನು ಹೇಳುತ್ತ ಈ ಶಾಸ್ತ್ರಿಯು "ರಾಜ, ನಿನ್ನ ಪರಿವಾರದವರಿಗಿಂತ ಹೆಚ್ಚುಕಾಲ ನೀನು ಬಾಳುವಿ" ಎಂದು ನುಡಿಯುತ್ತಾನೆ. ಸಂತುಷ್ಟನಾದ ರಾಜ ಈ ಎರಡನೇ ಶಾಸ್ತ್ರಿಗೆ ಉನ್ನತ ಹುದ್ದೆಯನ್ನು ನೀಡಿ ಸನ್ಮಾನಿಸು ತ್ತಾನೆ. ರಾಜನನ್ನು ಕೂಡಲೇ ಸಮೀಪಿಸಿದ ಮೊದಲನೇ ಶಾಸ್ತ್ರಿಯು "ರಾಜನೆ, ನಮ್ಮಿಬ್ಬರ ಮಾತುಗಳ ಅಭಿಪ್ರಾಯ ಒಂದೇ ಆಗಿದ್ದರೂ ಒಬ್ಬನಿಗೆ ಶಿಕ್ಷೆ, ಮತ್ತೊಬ್ಬನಿಗೆ ಅನುಗ್ರಹದ ಪಕ್ಷಪಾತ ಯಾಕೆ?" ಎಂದು ಪ್ರಶ್ನಿಸುತ್ತಾನೆ. ಆಗ ರಾಜನ ಉತ್ತರ :"**ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯಾತ್**" "ಸತ್ಯವನ್ನು ಪ್ರಿಯವಾಗಿ ಹೇಳಬೇಕು." ಮೊದಲನೆಯ ಶಾಸ್ತ್ರಿಯ ಮಾತಲ್ಲಿ ಸತ್ಯತೆ ಇದ್ದರೂ ಇಂಪಿರಲಿಲ್ಲ. ದ್ವಿತೀಯನ ಮಾತಲ್ಲಿ ಸತ್ಯತೆಯ ಜೊತೆಗೆ ಇಂಪಿನ ಮೋಡಿ ಇದ್ದುದರಿಂದ ಅವನು ಪುರಸ್ಕೃತ ನಾದ. ಸೂರ್ಯೋದಯವಾಗುತ್ತಿರುವಂತೆಯೇ ಬೈಗುಳ ಮೂಲಕ ಮನೆಮಂದಿಯನ್ನು ಎಬ್ಬಿಸುವ ಪರಿಯನ್ನು ಎಲ್ಲೆಡೆ ಕಾಣುತ್ತೇವೆ. ಆದರೆ ವಿಶ್ವಾಮಿತ್ರರು ಶ್ರೀರಾಮನನ್ನು ಎಬ್ಬಿಸು ತ್ತಿದ್ದ ಪರಿ ಎಷ್ಟು ಸೊಗಸು : **ಕೌಸಲ್ಯಾ ಸುಪ್ರಜಾರಾಮ ಪೂರ್ವಾ ಸಂಧ್ಯಾ ಪ್ರವರ್ತತೇ | ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಮ್ ||**—"ಕೌಸಲ್ಯೆಯ ಒಳ್ಳೆಯ ಮಗ ನಾದ ರಾಮನೇ, ಬೆಳಗಾಗುತ್ತಿದೆ. ಮಹಾಪರಾಕ್ರಮಿಯಾದ ನೀನು ಏಳು. ಎದ್ದು ದೈನಂದಿನ ದೇವಕಾರ್ಯವನ್ನು ಪೂರೈಸು."

**ನ ಬ್ರೂಯಾತ್ ಸತ್ಯಮಪ್ರಿಯಂ.** ಒಂದೊಮ್ಮೆ ಸತ್ಯ ವಿಚಾರವೂ ಅಪ್ರಿಯವಾಗಿರುವುದಾದರೆ ಪ್ರಿಯವಾಗುವಂತೆ ಹೇಳ ಬೇಕು. ಪ್ರಿಯವಾಗುವ ರೀತಿಯಲ್ಲಿ ಹೇಳಲು ಸಾಧ್ಯವಾಗದೆ ಹೋದರೆ ಹೇಳಲೇಬಾರದು. ಪ್ರಸವ ವೇದನೆಯನ್ನು ಅನುಭವಿ ಸುತ್ತಿರುವ ಒಬ್ಬ ಮಹಿಳೆಗೆ ಆಗ ತಾನೇ ಅಪಘಾತದಲ್ಲಿ ಮೃತ ನಾದ ಅವಳ ಪತಿಯ ಸತ್ಯವಿಚಾರವನ್ನು ಹೇಗೆ ತಿಳಿಸಬೇಕು? ಜೀವನಕ್ಷಣಿಕದ ಉಪದೇಶ ನೀಡಿ, ಪತಿರಹಿತವಾಗಿಯೂ ಜೀವನನಿರ್ವಹಣೆಯ ಮಾರ್ಗವನ್ನು ಬೋಧಿಸಿ, ಮಕ್ಕಳಿಂದ ರಕ್ಷಣೆಯ ಭರವಸೆಯನ್ನು ಮೂಡಿಸಿ ಕ್ರಮೇಣ ವಿಷಯವನ್ನು ತಿಳಿಸಬೇಕು. ಅದಕ್ಕೆ ಬದಲಾಗಿ ಒಮ್ಮಿಂದೊಮ್ಮೆಯೇ ನೈಜ ವನ್ನು ಆ ಪರಿಸ್ಥಿತಿಯಲ್ಲಿ ಹೇಳಿದರೆ ಮಹಿಳೆಯ ಗತಿ ಏನಾಗ ಬೇಕು? ತಂದೆಯಾದ ದಶರಥನ ಮರಣದ ವಿಷಯವನ್ನು ಭರತನು ಅರಿವ ಪರಿ ಭಾಸಕವಿಯ "ಪ್ರತಿಮಾ" ನಾಟಕದಲ್ಲಿ ಅನ್ಯಾದೃಶವಾಗಿ ಮೂಡಿಬಂದಿದೆ. ಅಯೋಧ್ಯೆಯ ಹೊರಗಿನ

ಉದ್ಯಾನವಲ್ಲಿ ಮೃತ ರಘುವಂಶದ ರಾಜರ ಪ್ರತಿಮೆಗಳಿವೆ. ದಿಲೀಪ, ರಘು, ಅಜ ಈ ಮೂವರ ಪ್ರತಿಮೆಯ ಜೊತೆಗೆ ನಾಲ್ಕನೆಯದಾಗಿ ದಶರಥನ ಪ್ರತಿಮೆಯೂ ಇದೆ. ದಶರಥನ ಮರಣವಾರ್ತೆಯನ್ನು ಸಾರಥಿ ನೇರವಾಗಿ ಹೇಳುವುದಿಲ್ಲ. ಸಾಕ್ಷಾತ್ ಭರತನೇ ಪ್ರತಿಮಾಗೃಹದ ದೇವಕುಲಿಕನಲ್ಲಿ ಪ್ರತಿಮೆಗಳ ಬಗ್ಗೆ ವಿಚಾರಿಸುತ್ತಾನೆ. ಮೊದಲನೆಯ ಮೂರು ಪ್ರತಿಮೆಗಳನ್ನು ಪರಿಚಯಿಸಿಕೊಂಡ ಭರತನು ನಾಲ್ಕನೆಯದ್ದನ್ನು ನೋಡಿ ತವಕಿಸುತ್ತಾನೆ. ಪದೇ ಪದೇ ಮೊದಲನೆಯ ಮೂರನ್ನೇ ಪರಿಚಯಿಸಿಕೊಳ್ಳುತ್ತಾನೆ. ಅನಂತರ ಅವನ ಪ್ರಶ್ನೆ: **ಕಿಂ ಜೀವತಾಮಪಿ ಪ್ರತಿಮಾಃ ಸ್ಥಾಪ್ಯಂತೇ?** "ಬದುಕಿರುವವರ ಪ್ರತಿಮೆಗಳೂ ಸ್ಥಾಪಿತವಾಗುವುವೆ?" ಒಂದು ವೇಳೆ ಬದುಕಿರುವವರ ಪ್ರತಿಮೆಗಳೂ ಸ್ಥಾಪಿತವಾಗುವುದಾದರೆ ತನ್ನ ತಂದೆಯಾದ ದಶರಥನು ಬದುಕಿರಬಹುದು ಎಂಬ ವಿಶ್ವಾಸ ಭರತನಿಗೆ. ಆದರೆ ದೇವಕುಲಿಕನಿಂದ ನಕಾರಾತ್ಮಕ ಪ್ರತಿಕ್ರಿಯೆ ಬಂದಾಗ ತನ್ನ ತಂದೆಯಾದ ದಶ ರಥನ ಮರಣವನ್ನು ನಿಶ್ಚೈಸಿಕೊಳ್ಳುತ್ತಾನೆ. ಒಂದೊಮ್ಮೆ ಸಾರಥಿಯು ನೇರವಾಗಿ ದಶರಥನ ಮರಣ ವಾರ್ತೆಯನ್ನು ಭರತನಲ್ಲಿ ತಿಳಿಸಿದ್ದರೆ ಏನೊ ಸಂಭವಿಸಬಹುದಾಗಿತ್ತು. ಅದು ಆಗಲಿಲ್ಲ. ಕ್ರಮೇಣ ತಿಳಿದುಕೊಂಡ ತಂದೆಯ ಮರಣದಿಂದ ಭರತನು ಶೋಕವನ್ನಷ್ಟೆ ಹೊಂದುತ್ತಾನೆ. ಇದು ಸತ್ಯವನ್ನು ತಿಳಿಸುವ ನಿಜವಾದ ಪರಿ.

**ಪ್ರಿಯಂ ಚ ನಾನೃತಂ ಬ್ರೂಯಾತ್.** ಕೆಲವರಿದ್ದಾರೆ ಹೊಗಳುಭಟರು. ಸ್ವಾಮಿಯ ದೋಷಗಳನ್ನೂ ಗುಣಗಳೆಂದೇ ಗಾನಮಾಡಿ ಸ್ವಾರ್ಥ ಸಾಧಿಸಿಕೊಳ್ಳುವರು. ಹೊಗಳಿಕೆಯನ್ನು ಸ್ವೀಕರಿಸದವರು ಪ್ರಾಯಃ ಯಾರೂ ಇಲ್ಲ. ಕೇವಲ ಹೊಗಳಿಕೆ ಮಾತ್ರ, ವಾಸ್ತವ ಏನೂ ಇಲ್ಲ ಎಂದು ತಿಳಿದಿದ್ದರೂ ಹೊಗಳಿಸಿಕೊಳ್ಳುವ ಆ ಕ್ಷಣದಲ್ಲಿ ಆನಂದತುಂದಿಲರಾಗುತ್ತಾರೆ. ಹೀಗೆ ಇಂಪಿಗಾಗಿ ಸುಳ್ಳನ್ನೇ ಹೇಳುವುದು ಸರ್ವಥಾ ಸರಿಯಲ್ಲ. ಸುಳ್ಳಿನ ಸರಮಾಲೆಯನ್ನು ಹೆಣೆಯುತ್ತ ಕಿವಿಗೆ ರಂಗನ್ನುಂಟುಮಾಡುವ ಸ್ವಭಾವ ಸರ್ವಥಾ ಪರಿತ್ಯಾಜ್ಯ. ಮನು ಸ್ಮೃತಿಯ ಮೇಲಿನ ಶ್ಲೋಕಕ್ಕೆ ಸಂವಾದಿಯಾಗಿ ವಾಗ್ಭಟನು 'ಅಷ್ಟಾಂಗಹೃದಯ'ದಲ್ಲಿ **ಕಾಲೇ ಹಿತಂ ಮಿತಂ ಪೇಶಲಂ ಅವಿಸಂವಾದಿ (ಸತ್ಯಂ) ಬ್ರೂಯಾತ್** ಎಂದಿದ್ದಾನೆ. "ಸಕಾಲದಲ್ಲಿ ಹಿತವಾದ, ಮಿತವಾದ, ಮೃದುವಾದ ಸತ್ಯ ಮಾತನ್ನಾಡಬೇಕು" ಎಂಬುದು ಅವನ ಅಭಿಪ್ರಾಯ.

ಮನುಸ್ಮೃತಿಕಾರ ಹೇಳುವ ರೀತಿಯಲ್ಲಿ **ಪ್ರಿಯವಾಕ್ಯ ಪ್ರದಾನೇನ ಸರ್ವೇ ತುಷ್ಯಂತಿ ಜಂತವಃ | ತಸ್ಮಾತ್ತದೇವ ವಕ್ತವ್ಯಂ ವಚನೇ ಕಾ ದರಿದ್ರತಾ ||**—"ಪ್ರಿಯವಾದ ಸತ್ಯ ಮಾತಿನಿಂದ ಎಲ್ಲರೂ ಸಂತುಷ್ಟರಾಗುತ್ತಿರಲು ಅದನ್ನೇ ಜೀವನದಲ್ಲಿ ಯಾಕೆ ಅಳವಡಿಸಿಕೊಳ್ಳಬಾರದು? ಮಾತಿಗೆಲ್ಲಿದೆ ದಾರಿದ್ರ್ಯ?" ಆಡುವ ಮಾತನ್ನು ಇಂಪಾಗಿ ಆಡು, ಸತ್ಯವನ್ನಾಡು. ಇದು ಹಿರಿಯರ ಬಯಕೆ. ಆದ್ದರಿಂದ ಜೀವನ ಪೂರ್ತಿ ಸತ್ಯಸಂಕಲ್ಪರಾಗಿ ಸತ್ಯದ ಬಾಳಿನ ಪಥದಲ್ಲಿ ಸಾಗೋಣ.

## ಓಂಕಾರದ ಝೇಂಕಾರ

ಆನಂದ ಆನಂದ
ಜಗದಾನಂದ ಪರಮಾನಂದ
ಬ್ರಹ್ಮಾನಂದ ವಿವೇಕಾನಂದ
ಏಳಿ ಎದ್ದೇಳಿ ಎಂದು ಘರ್ಜಿಸಿದ
ಸಿಂಹ ಇಂದು ಕಾಶ್ಮೀರದಿಂದ
ಕನ್ಯಾಕುಮಾರಿಯವರೆಗೆ ಚಾಚಿರುವ
ಅಂಧತ್ವದ ಸಂಹಾರಕ್ಕೆ
ಮರುಹುಟ್ಟು ಪಡೆಯಬೇಕಾಗಿದೆ.
ನಿನ್ನ ಕನಸಿನ ಭಾರತ ಇನ್ನೂ ಎಚ್ಚೆತ್ತಿಲ್ಲ
ಪಾಂಚಜನ್ಯ ಮೊಳಗೇ ಇಲ್ಲ.
ಇಲ್ಲಿ ಶಕುನಿ, ಸುಯೋಧನರೇ ಹೆಚ್ಚು.
ಋಷಿ, ಮುನಿ, ಯೋಗಿಗಳಿಗೆಲ್ಲ ಕಿಚ್ಚು.
ಕರ್ಮಯೋಗ, ರಾಜಯೋಗ, ಭಕ್ತಿಯೋಗ
ಜ್ಞಾನಯೋಗದ ಸುಯೋಗ ನಮಗಿಲ್ಲ.
ಏಳು ಎದ್ದೇಳು.... ಓ ಎನ್ನ
ಸಪ್ತ ಋಷಿ ಮಂಡಲದ ದಿವ್ಯ
ಚೈತನ್ಯವೇ, ಬಡಿದೆಬ್ಬಿಸು ಹುರಿದುಂಬಿಸು
ಸುಯೋಗದ ಕಹಳೆಯ ಕೊಂಬನೂದು.
ಭಾರತಾಂಬೆಯ ವೇದಪುತ್ರನೆ,
ವೈಚಾರಿಕತೆಯ ಉನ್ನತ ಶಿಖರವೆ,
ಗಲ್ಲಿಗಲ್ಲಿಗಳಲ್ಲಿ ಹುಳು ಹುಪ್ಪಟೆ-
ಗಳಂತೆ ತಲೆ ಎತ್ತಿರುವ ಮಾಯಾ
ಅಣಬೆಗಳ ನಾಶಕ್ಕೆ ಮಗುದೊಮ್ಮೆ
ಜನ್ಮವೆತ್ತಿ ಬಾ....
ಬಾ ರಾಗವಾಗಿ, ಸೇರೆನ್ನ ನಾದವಾಗಿ
ಹೊಮ್ಮಲಿ ರಾಗ ಸಂಗಮ.
ನಿನ್ನ ರಾಗಕ್ಕೆ ನಾನೇ ತಾಳ
ನಿನ್ನ ಉಸಿರಿಗೆ ನಾನೇ ಕೊಳಲು
ನಿನ್ನ ಓಂಕಾರದ ತಂಬೂರಿಯ
ಝೇಂಕಾರದ ದುಂಬಿ ನಾನು
ನಮ್ಮ ಸಮಾಗಮದ ದುಂದುಭಿ
ಮೊಳಗಲು....
ಸರ್ವೇ ಜನಾಃ ಸುಖಿನೋ ಭವಂತು!
ನಿನ್ನ ಚರಣ ಕಮಲದ
ಧೂಳು ಎನ್ನ ಈ ಬದುಕು.
ಆನಂದ ಆನಂದ
ಪರಮಾನಂದ ಆಗಬಾರದೇಕೆ
ಎನ್ನ ಪಾಲಿನ ಪ್ರಣವಾನಂದ?

*—ಸಂತೋಷ್ ಅನಂತಪುರಿ*